1. ಹನುಮನಪುರ
2. ದೊಡ್ಡ ಕವಲಂದೆ
3. ಕೆ.ಆರ್. ಪುರ
4. ಹಳೇಪುರ
5. ಭುಜಂಗಯ್ಯನಹುಂಡಿ
6. ನೆರಳೆ
7. ಡೆಮ್ಮರಗಾಲ
8. ಕೋಣನೂರು
9. ಕುಂಬರಹಳ್ಳಿ
10. ಘಟವಾಡಿ
11. ಘಟವಾಡಿಪುರ
12. ಬಸವಟ್ಟಿಗೆ
13. ಚುಂಚನಹಳ್ಳಿ
14. ನಂಜನಹಳ್ಳಿ
15. ಜಾತಳಾಪುರ
16. ತೊರವಳ್ಳಿ
17. ದಾಸನೂರು
18. ಹಾಡ್ಯ
19. ತಳ್ಳೂರು
20. ಬಾನಹಳ್ಳಿ
21. ಕಮರವಾಡಿ
22. ದೇಮಳ್ತಿ
23. ದೇಮಳ್ತಿಮೂಲೆ
24. ಅಂಕನಕಟ್ಟೆಮೂಲೆ
25. ಹೆಗ್ಗವಾಡಿ
26. ಕುದೇರು ಮತ್ತು
27. ಬಾಗಲಿ

ಈ) ಹೌದು ಬಂದಿದೆ.

ಉ) ಕಾಳಿಕಾಂಬ ಕಾಲೋನಿಯ ವಿದ್ಯುದ್ದೀಕರಣದ ಬಗ್ಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ. ಬೆಲವತ್ತ ಕಾಲೋನಿಯ ವಿದ್ಯುದ್ದೀಕರಣಕ್ಕಾಗಿ ಅಂದಾಜು ಪಟ್ಟಿಯನ್ನು ಮಂಜೂರು ಮಾಡಲಾಗಿದೆ.

ಸಂತೇಮರಳ್ಳಿ ಕ್ಷೇತ್ರದ ವ್ಯಾಪ್ತಿಗೆ ಬರುವ ಕೆರೆಗಳಲ್ಲಿ ಹೂಳೆತ್ತುವುದು.

1244 - ಶ್ರೀ ಎ. ಆರ್. ಕೃಷ್ಣ ಮೂರ್ತಿ (ಸಂತೇಮಾರಹಳ್ಳಿ) : ಮಾನ್ಯ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಂತೇಮಾರನಹಳ್ಳಿ ಕ್ಷೇತ್ರದ ವ್ಯಾಪ್ತಿಗೆ ಬರುವ ಚಾಮರಾಜನಗರ ತಾಲ್ಲೂಕು ಹೊಂಗನೂರು, ಹಿರೇಕೆರೆ ಗ್ರಾಮ ಹಿರಸವಾಡಿ, ಸುತ್ತೂರು, ಉಮ್ಮತ್ತೂರು ಹಾಗೂ ನಂಜನಗೂಡು ತಾಲ್ಲೂಕು ಹಳೇಪುರ ಗ್ರಾಮಗಳ ಕೆರೆಗಳಲ್ಲಿ ಹೊಳೆತ್ತಲು ಕ್ರಮ ಕೈಗೊಳ್ಳಲಾಗಿದೆಯೇ?*

ಆ) *ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚ ಎಷ್ಟು ಹಾಗೂ ಈ ಸಾಲಿನಲ್ಲಿಯೇ ಕಾರ್ಯಾರಂಭ ವಾಗುವುದೇ?*

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಚಾಮರಾಜನಗರ ತಾಲ್ಲೂಕಿನಲ್ಲಿ ಹೊಂಗನೂರು ಹಿರೇಕೆರೆ ಮತ್ತು ಉಮ್ಮತ್ತೂರು ಕೆರೆ ನಂಜನಗೂಡು ತಾಲ್ಲೂಕಿನಲ್ಲಿ ಹಳೇಪುರ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮವನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಲಾಗಿದೆ.

ಆ)

ಕ್ರ. ಸಂ.	ತಾಲ್ಲೂಕು	ಕೆರೆಯ ಹೆಸರು	ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)
1.	ಚಾಮರಾಜನಗರ ಹಿರೇಕೆರೆ	ಹೊಂಗನೂರು	352.00
2.	ಚಾಮರಾಜನಗರ	ಉಮ್ಮತ್ತೂರು ಕೆರೆ	45.00
3.	ನಂಜನಗೂಡು	ಹಳೇಪುರ ಕೆರೆ	190.00

ಸದರೀ ಕೆರೆಗಳಲ್ಲಿ ಹೂಳೆತ್ತುವ ಕಾಮಗಾರಿಗಳನ್ನು ಈ ಸಾಲಿನಲ್ಲೇ ತೆಗದುಕೊಳ್ಳಲಾಗುವುದು.

ಚಾಮರಾಜನಗರ ತಾಲ್ಲೂಕು ವ್ಯಾಪ್ತಿಗೆ ಬರುವ ಸುವರ್ಣಾವತಿ ಹಾಗೂ ಚಿಕ್ಕಹೊಳೆ ಜಲಾಶಯಗಳಿಗೆ ವಿಶೇಷ ಅನುದಾನ ಬಿಡುಗಡೆ

1245 - ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರಹಳ್ಳಿ) : ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ವ್ಯಾಪ್ತಿಗೆ ಬರುವ ಸುವರ್ಣಾವತಿ ಹಾಗೂ ಚಿಕ್ಕಹೊಳೆ ಜಲಾಶಯಗಳಿಗೆ 1998-99ನೇ ಸಾಲಿನಲ್ಲಿ ಮಾಡಲಾಗಿದೆಯೇ?

ಆ) ಅನುದಾನ ಮೊಬಲಗೆಷ್ಟು ಈಗ ಹಾಲಿ ಜಲಾಶಯಗಳಿಗೆ ನೀಡುತ್ತಿರುವ ಅನುದಾನ ಎಷ್ಟು?

ಇ) ಪ್ರಾರಂಭವಾದಾಗಿನಿಂದ ಈವರೆವಿಗೆ ಅನುದಾನದಲ್ಲಿ ಏನಾದರೂ ಹೆಚ್ಚಳವಾಗಿದೆಯೇ (ವಿವರ ನೀಡುವುದು)?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಯೋಜನೆ ಪ್ರಾರಂಭವಾದಾಗಿನಿಂದ ಪ್ರತಿ ವರ್ಷವೂ ನೀಡುತ್ತಿರುವ ಅನುದಾನದಲ್ಲಿ ಹೆಚ್ಚಳವಾಗಿರುವುದಿಲ್ಲ. ಆದರೆ, ಆಯಾ ವರ್ಷದ ದರಸೂಚಿ ಅನುಗುಣವಾಗಿ ನಿರ್ವಹಣೆಯ ಅನುದಾನವು ಭಾಗಶಃ ಹೆಚ್ಚಳವಾಗಿದೆ. ಇದರ ಬಗ್ಗೆ ವಿವರಣೆ ತಂಖ್ತೆಯನ್ನು ಪ್ರತಿಯಲ್ಲಿ ಲಗತ್ತಿಸಲಾಗಿದೆ.